# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1421(1632) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಸಿ.ಟಿ. ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 19.12.2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 2 ವರ್ಷಗಳಿಂದ ಎಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ರಾಜ್ಯವು ದೇಶಕ್ಕೆ ಎಷ್ಟನೇ ಸ್ಥಾನದಲ್ಲಿದೆ; (ವರ್ಷವಾರು/ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿರುವುದು ಕಂಡುಬಂದಿರುವುದಿಲ್ಲ. ಕಳೆದ 3 ವರ್ಷಗಳಿಗೆ ಹೋಲಿಸಿದಾಗ ರೈತರ ಆತ್ಮಹತ್ಯೆ ಪ್ರಕರಣಗಳು ಇಳಿಕೆ ಪ್ರಮಾಣದಲ್ಲಿರುತ್ತದೆ.<br>2023-2024 ನೇ ಸಾಲಿನಲ್ಲಿ 1254, 2024-25 ನೇ ಸಾಲಿನಲ್ಲಿ 1178 ಹಾಗೂ 2025-26 ನೇ ಸಾಲಿನಲ್ಲಿ 377 ರೈತರ ಆತ್ಮಹತ್ಯೆ ಪ್ರಕರಣಗಳು, ವರದಿಯಾಗಿರುತ್ತದೆ. ರಾಜ್ಯವು ರೈತರ ಆತ್ಮಹತ್ಯೆಯಲ್ಲಿ ದೇಶಕ್ಕೆ ಎರಡನೇ ಸ್ಥಾನದಲ್ಲಿದೆ (ಕೇಂದ್ರ ಸರ್ಕಾರದ ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ ವರದಿಯನ್ವಯ) ವರ್ಷವಾರು ಹಾಗೂ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಆತ್ಮಹತ್ಯೆ ಮಾಡಿಕೊಂಡ ಎಷ್ಟು ರೈತ ಕುಟುಂಬಗಳಿಗೆ ಪರಿಹಾರ ಧನ ನೀಡಲಾಗಿದೆ; ಎಷ್ಟು ಪ್ರಕರಣಗಳಲ್ಲಿ ಪರಿಹಾರ ನೀಡಲು ಬಾಕಿ ಇದೆ; ನೀಡಿರುವ ಪರಿಹಾರ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಜಿಲ್ಲಾವಾರು ಪರಿಹಾರ ನೀಡಿರುವ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. |

| | | |
|---|---|---|
| ಇ) | ಯಾವ ಕಾರಣಕ್ಕೆ ಎಲ್ಲಾರಿಗೂ ಪರಿಹಾರ ವಿತರಣೆ ಆಗಿಲ್ಲ; ಬಾಕಿ ಉಳಿದವರಿಗೆ ಸರ್ಕಾರ ಯಾವ ಕಾಲಮಿತಿಯೊಳಗೆ ಪರಿಹಾರ ವಿತರಣೆ ಮಾಡಲಿದೆ; | ಬಾಕಿ ಉಳಿದಿರುವ ಪ್ರಕರಣಗಳಲ್ಲಿ ಕೆಲವೊಂದು ತಾಂತ್ರಿಕ ಸಮಸ್ಯೆ ಇರುವುದರಿಂದ ಪರಿಹಾರ ಪಾವತಿಗೆ ವಿಳಂಬವಾಗಿರುತ್ತದೆ. ಡಿಬಿಟಿ ಘಟಕದಲ್ಲಿ ಕೆಳಕಂಡ ತಾಂತ್ರಿಕ ಸಮಸ್ಯೆಗಳು ಕಂಡುಬರುತ್ತವೆ.<br>1. Account reached maximum credit limit, Account closed,<br>2. Dormant A/c, Invalid Account, Invalid bank Identifier,<br>3. Aadhar not mapped to account<br>4. A/c Blocked or frozen<br>5. Npci not mapping<br>ತಾಂತ್ರಿಕ ಸಮಸ್ಯೆ ಬಗೆಹರಿದ ನಂತರ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು. ಹಾಗೂ ಹಿಂದಿನ ಸಾಲಿಗೆ ಸೇರಿರುವ ಪ್ರಕರಣಗಳಿಗೆ ಹಾಗೂ ಹಿಂದಿನ ಸಾಲಿಗೆ ಸರ್ಕಾರದ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಅಇ 658 ವೆಚ್ಚ-7/2024 ದಿ: 3-7-2024 ಮತ್ತು ಸರ್ಕಾರದ ಪತ್ರ ಸಂಖ್ಯೆ ಆರ್‌ಡಿ 100 ಕೆಎಟಿ ಎಸ್‌ಎಸ್‌ಪಿ 2021 ದಿ: 6-7-2024 ರಂತೆ ಪರಿಹಾರ ವಿತರಿಸಲು ಅವಕಾಶವಿರುವುದಿಲ್ಲ. (ಅನುಬಂಧ-3ರಲ್ಲಿ ಒದಗಿಸಲಾಗಿದೆ.)<br>ಪ್ರಸ್ತುತ ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ.956.ವೆಚ್ಚ-7/2025 ದಿನಾಂಕ: 06.11.2025 ರನ್ವಯ ರೈತರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ನಡೆದ ದಿನಾಂಕದಿಂದ 9 ತಿಂಗಳ ಒಳಗಾಗಿ ಇತ್ಯರ್ಥಪಡಿಸಿ ಪಾವತಿಸಲು ಹಾಗೂ ಆಕಸ್ಮಿಕ ಮರಣ ಮತ್ತು ಬಣವೆ ನಮ್ಮ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಕರಣ ನಡೆದ ದಿನಾಂಕದಿಂದ 6 ತಿಂಗಳ ಒಳಗಾಗಿ ಇತ್ಯರ್ಥ ಪಡಿಸಿ ಪಾವತಿಸಲು ಆದೇಶಿಸಲಾಗಿದೆ. (ಅನುಬಂಧ-4 ಒದಗಿಸಲಾಗಿದೆ.) |
| ಈ) | ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ರೂಪಿಸಿರುವ ಯೋಜನೆಗಳು ಯಾವುವು; ಆತ್ಮಹತ್ಯೆ ಪ್ರಕರಣಗಳು ಹೆಚ್ಚಳಗೊಂಡಿರುವುದು ಸರ್ಕಾರದ ಯೋಜನೆಗಳು ವಿಫಲವಾಗಿರುವುದರ ಸಂಕೇತವಲ್ಲವೇ? | ರೈತರ ಆತ್ಮಹತ್ಯೆ ತಡೆಯಲು ಕೃಷಿ ಇಲಾಖೆಯಿಂದ/ ಸರ್ಕಾರದಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳ ಮಾಹಿತಿಯನ್ನು ಅನುಬಂಧ-5ರಲ್ಲಿ ನೀಡಲಾಗಿದೆ. ಕಳೆದ ಮೂರು ವರ್ಷಗಳಿಗೆ ಹೋಲಿಸಿದಾಗ ರೈತರ ಆತ್ಮಹತ್ಯೆ ಪ್ರಕರಣಗಳು ಕಡಿಮೆಯಾಗಿರುತ್ತದೆ. |

ಸಂಖ್ಯೆ:AGRI/291/AML/2025

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು.

## ಅನುಬಂಧ-1

## 2023-24 ನೇ ಸಾಲಿನ ರೈತರ ಆತ್ಮಹತ್ಯೆ ವರದಿ

| ಕ್ರ. ಸಂ | ಜಿಲ್ಲೆಗಳು | ವರದಿ | ತಿರಸ್ಕೃತ | ತೀರ್ಮಾನಿಸಬೇಕಾದ ಪ್ರಕರಣಗಳು | ತೀರ್ಮಾನಿಸಬೇಕಾದ ಪ್ರಕರಣಗಳಲ್ಲಿ ಅರ್ಹ ಪ್ರಕರಣಗಳು |
|---|---|---|---|---|---|
| 1 | ಬಾಗಲಕೋಟೆ | 31 | 1 | 30 | 30 |
| 2 | ಬಳ್ಳಾರಿ | 15 | 2 | 13 | 13 |
| 3 | ಬೆಂಗಳೂರು(ಗ್ರಾ) | 0 | 0 | 0 | 0 |
| 4 | ಬೆಂಗಳೂರು(ನ) | 1 | 0 | 1 | 1 |
| 5 | ಬೆಳಗಾವಿ | 119 | 16 | 103 | 103 |
| 6 | ಬೀದರ್ | 76 | 0 | 76 | 76 |
| 7 | ಚಾಮರಾಜನಗರ | 2 | 1 | 1 | 1 |
| 8 | ಚಿಕ್ಕಬಳ್ಳಾಪುರ | 3 | 0 | 3 | 3 |
| 9 | ಚಿಕ್ಕಮಗಳೂರು | 80 | 16 | 64 | 64 |
| 10 | ಚಿತ್ರದುರ್ಗ | 31 | 4 | 27 | 27 |
| 11 | ದಕ್ಷಿಣಕನ್ನಡ | 5 | 0 | 5 | 5 |
| 12 | ದಾವಣಗೆರೆ | 56 | 5 | 51 | 51 |
| 13 | ಧಾರವಾಡ | 102 | 22 | 80 | 80 |
| 14 | ಗದಗ | 33 | 6 | 27 | 27 |
| 15 | ಹಾಸನ | 43 | 4 | 39 | 39 |
| 16 | ಹಾವೇರಿ | 122 | 17 | 105 | 105 |
| 17 | ಕಲಬುರಗಿ | 88 | 20 | 68 | 68 |
| 18 | ಕೊಡಗು | 5 | 0 | 5 | 5 |
| 19 | ಕೋಲಾರ | 1 | 0 | 1 | 1 |
| 20 | ಕೊಪ್ಪಳ | 30 | 4 | 26 | 26 |
| 21 | ಮಂಡ್ಯ | 48 | 3 | 45 | 45 |
| 22 | ಮೈಸೂರು | 77 | 9 | 68 | 68 |
| 23 | ರಾಯಚೂರು | 22 | 5 | 17 | 17 |
| 24 | ಬೆಂಗಳೂರು ದಕ್ಷಿಣ | 7 | 0 | 7 | 7 |
| 25 | ಶಿವಮೊಗ್ಗ | 58 | 8 | 50 | 50 |
| 26 | ತುಮಕೂರು | 22 | 5 | 17 | 17 |
| 27 | ಉಡುಪಿ | 0 | 0 | 0 | 0 |
| 28 | ಉತ್ತರಕನ್ನಡ | 11 | 2 | 9 | 9 |
| 29 | ವಿಜಯಪುರ | 60 | 2 | 58 | 58 |
| 30 | ವಿಜಯನಗರ | 35 | 8 | 27 | 27 |
| 31 | ಯಾದಗಿರಿ | 71 | 4 | 67 | 67 |
| | **ಒಟ್ಟು** | **1254** | **164** | **1090** | **1090** |

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಮತ್ತು ಯೋಜನೆ)

## 2024-25 ನೇ ಸಾಲಿನ ರೈತರ ಆತ್ಮಹತ್ಯೆ ವರದಿ

| ಕ್ರ. ಸಂ | ಜಿಲ್ಲೆಗಳು | ವರದಿ | ತಿರಸ್ಕೃತ | ತೀರ್ಮಾನಿಸಬೇಕಾದ ಪ್ರಕರಣಗಳು | ತೀರ್ಮಾನಿಸಬೇಕಾದ ಪ್ರಕರಣಗಳಲ್ಲಿ ಅರ್ಹ ಪ್ರಕರಣಗಳು |
|---|---|---|---|---|---|
| 1 | ಬಾಗಲಕೋಟೆ | 31 | 0 | 31 | 31 |
| 2 | ಬಳ್ಳಾರಿ | 11 | 4 | 7 | 7 |
| 3 | ಬೆಂಗಳೂರು(ಗ್ರಾ) | 0 | 0 | 0 | 0 |
| 4 | ಬೆಂಗಳೂರು(ನ) | 0 | 0 | 0 | 0 |
| 5 | ಬೆಳಗಾವಿ | 104 | 16 | 88 | 88 |
| 6 | ಬೀದರ್ | 70 | 0 | 70 | 70 |
| 7 | ಚಾಮರಾಜನಗರ | 4 | 1 | 3 | 3 |
| 8 | ಚಿಕ್ಕಬಳ್ಳಾಪುರ | 3 | 0 | 3 | 3 |
| 9 | ಚಿಕ್ಕಮಗಳೂರು | 37 | 9 | 28 | 28 |
| 10 | ಚಿತ್ರದುರ್ಗ | 39 | 6 | 33 | 33 |
| 11 | ದಕ್ಷಿಣಕನ್ನಡ | 6 | 1 | 5 | 5 |
| 12 | ದಾವಣಗೆರೆ | 47 | 5 | 42 | 42 |
| 13 | ಧಾರವಾಡ | 77 | 20 | 57 | 57 |
| 14 | ಗದಗ | 52 | 17 | 35 | 35 |
| 15 | ಹಾಸನ | 48 | 4 | 44 | 44 |
| 16 | ಹಾವೇರಿ | 140 | 7 | 133 | 133 |
| 17 | ಕಲಬುರಗಿ | 106 | 21 | 85 | 85 |
| 18 | ಕೊಡಗು | 6 | 0 | 6 | 6 |
| 19 | ಕೋಲಾರ | 2 | 0 | 2 | 2 |
| 20 | ಕೊಪ್ಪಳ | 26 | 5 | 21 | 21 |
| 21 | ಮಂಡ್ಯ | 52 | 1 | 51 | 51 |
| 22 | ಮೈಸೂರು | 81 | 13 | 68 | 68 |
| 23 | ರಾಯಚೂರು | 24 | 7 | 17 | 17 |
| 24 | ಬೆಂಗಳೂರು ದಕ್ಷಿಣ | 3 | 0 | 3 | 3 |
| 25 | ಶಿವಮೊಗ್ಗ | 56 | 5 | 51 | 51 |
| 26 | ತುಮಕೂರು | 17 | 1 | 16 | 16 |
| 27 | ಉಡುಪಿ | 0 | 0 | 0 | 0 |
| 28 | ಉತ್ತರಕನ್ನಡ | 13 | 2 | 11 | 11 |
| 29 | ವಿಜಯಪುರ | 50 | 1 | 49 | 49 |
| 30 | ವಿಜಯನಗರ | 24 | 3 | 21 | 21 |
| 31 | ಯಾದಗಿರಿ | 49 | 7 | 42 | 42 |
| **ಒಟ್ಟು** | | **1178** | **156** | **1022** | **1022** |

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಮತ್ತು ಯೋಜನೆ)

## 2025-26 ನೇ ಸಾಲಿನ ರೈತರ ಆತ್ಮಹತ್ಯೆ ವರದಿ 15.11.2025 ರ ಅಂತ್ಯಕ್ಕೆ)

| ಕ್ರ. ಸಂ | ಜಿಲ್ಲೆಗಳು | ವರದಿ | ತಿರಸ್ಕೃತ | ತೀರ್ಮಾನಿಸಬೇಕಾದ ಪ್ರಕರಣಗಳು | ತೀರ್ಮಾನಿಸಬೇಕಾದ ಪ್ರಕರಣಗಳಲ್ಲಿ ಅರ್ಹ ಪ್ರಕರಣಗಳು |
|---|---|---|---|---|---|
| 1 | ಬಾಗಲಕೋಟೆ | 17 | 0 | 17 | 17 |
| 2 | ಬಳ್ಳಾರಿ | 9 | 3 | 6 | 6 |
| 3 | ಬೆಂಗಳೂರು(ಗ್ರಾ) | 0 | 0 | 0 | 0 |
| 4 | ಬೆಂಗಳೂರು(ನ) | 1 | 0 | 1 | 1 |
| 5 | ಬೆಳಗಾವಿ | 36 | 2 | 34 | 34 |
| 6 | ಬೀದರ್ | 13 | 0 | 13 | 13 |
| 7 | ಚಾಮರಾಜನಗರ | 3 | 0 | 3 | 3 |
| 8 | ಚಿಕ್ಕಬಳ್ಳಾಪುರ | 1 | 0 | 1 | 1 |
| 9 | ಚಿಕ್ಕಮಗಳೂರು | 25 | 10 | 15 | 14 |
| 10 | ಚಿತ್ರದುರ್ಗ | 18 | 1 | 17 | 17 |
| 11 | ದಕ್ಷಿಣಕನ್ನಡ | 0 | 0 | 0 | 0 |
| 12 | ದಾವಣಗೆರೆ | 7 | 0 | 7 | 7 |
| 13 | ಧಾರವಾಡ | 16 | 0 | 16 | 15 |
| 14 | ಗದಗ | 7 | 0 | 7 | 7 |
| 15 | ಹಾಸನ | 27 | 3 | 24 | 24 |
| 16 | ಹಾವೇರಿ | 35 | 9 | 26 | 15 |
| 17 | ಕಲಬುರಗಿ | 40 | 4 | 36 | 34 |
| 18 | ಕೊಡಗು | 1 | 0 | 1 | 1 |
| 19 | ಕೋಲಾರ | 0 | 0 | 0 | 0 |
| 20 | ಕೊಪ್ಪಳ | 14 | 1 | 13 | 13 |
| 21 | ಮಂಡ್ಯ | 15 | 0 | 15 | 15 |
| 22 | ಮೈಸೂರು | 32 | 5 | 27 | 25 |
| 23 | ರಾಯಚೂರು | 8 | 3 | 5 | 5 |
| 24 | ಬೆಂಗಳೂರು ದಕ್ಷಿಣ | 1 | 0 | 1 | 1 |
| 25 | ಶಿವಮೊಗ್ಗ | 12 | 3 | 9 | 9 |
| 26 | ತುಮಕೂರು | 1 | 0 | 1 | 0 |
| 27 | ಉಡುಪಿ | 1 | 0 | 1 | 1 |
| 28 | ಉತ್ತರಕನ್ನಡ | 9 | 1 | 8 | 6 |
| 29 | ವಿಜಯಪುರ | 14 | 0 | 14 | 13 |
| 30 | ವಿಜಯನಗರ | 7 | 1 | 6 | 6 |
| 31 | ಯಾದಗಿರಿ | 7 | 0 | 7 | 7 |
| **ಒಟ್ಟು** | | **377** | **46** | **331** | **310** |

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಮತ್ತು ಯೋಜನೆ)

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ ರವಿ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1421 (1632) ಕ್ಕೆ ಅನುಬಂಧ - 2

| ಕ್ರಮ ಸಂ | ಜಿಲ್ಲೆ | 2023-24 | | 2024-25 | | | 2025-26 (ನವೆಂಬರ್-25 ರ ಅಂತ್ಯಕ್ಕೆ | | |
|---|---|---|---|---|---|---|---|---|---|
| | | ಪರಿಹಾರ ವಿತರಿಸಲಾದ ಫಲಾನುಭವಿಗಳ ಸಂಖ್ಯೆ | ಪರಿಹಾರ ಮೊತ್ತ | ಪರಿಹಾರ ವಿತರಿಸಲಾದ ಫಲಾನುಭವಿಗಳ ಸಂಖ್ಯೆ | ಪರಿಹಾರ ಮೊತ್ತ | ಬಾಕಿ | ಪರಿಹಾರ ವಿತರಿಸಲಾದ ಫಲಾನುಭವಿಗಳ ಸಂಖ್ಯೆ | ಪರಿಹಾರ ಮೊತ್ತ | ಬಾಕಿ |
| 1 | ಬಾಗಲಕೋಟೆ | 30 | 15000000 | 31 | 15500000 | 0 | 17 | 8500000 | 0 |
| 2 | ಬಳ್ಳಾರಿ | 13 | 6500000 | 6 | 3000000 | 1 | 1 | 500000 | 4 |
| 3 | ಬೆಂಗಳೂರು(ಗ್ರಾ) | 0 | 0 | 0 | 0 | 0 | 0 | 0 | 0 |
| 4 | ಬೆಂಗಳೂರು(ನ) | 1 | 500000 | 0 | 0 | 0 | 0 | 0 | 0 |
| 5 | ಬೆಳಗಾವಿ | 101 | 50500000 | 75 | 37500000 | 13 | 22 | 11000000 | 0 |
| 6 | ಬೀದರ್ | 76 | 38000000 | 45 | 22500000 | 25 | 6 | 3000000 | 0 |
| 7 | ಚಾಮರಾಜನಗರ | 0 | 0 | 3 | 1500000 | 0 | 2 | 1000000 | 0 |
| 8 | ಚಿಕ್ಕಬಳ್ಳಾಪುರ | 3 | 1500000 | 2 | 1000000 | 1 | 1 | 500000 | 0 |
| 9 | ಚಿಕ್ಕಮಗಳೂರು | 64 | 32000000 | 28 | 14000000 | 0 | 10 | 5000000 | 0 |
| 10 | ಚಿತ್ರದುರ್ಗ | 27 | 13500000 | 31 | 15500000 | 0 | 9 | 4500000 | 0 |
| 11 | ದಕ್ಷಿಣಕನ್ನಡ | 5 | 2500000 | 5 | 2500000 | 0 | 0 | 0 | 0 |
| 12 | ದಾವಣಗೆರೆ | 51 | 25500000 | 38 | 19000000 | 4 | 3 | 1500000 | 0 |
| 13 | ಧಾರವಾಡ | 77 | 38500000 | 55 | 27500000 | 2 | 4 | 2000000 | 0 |
| 14 | ಗದಗ | 27 | 13500000 | 34 | 17000000 | 0 | 2 | 1000000 | 0 |
| 15 | ಹಾಸನ | 38 | 19000000 | 35 | 17500000 | 9 | 0 | 0 | 0 |
| 16 | ಹಾವೇರಿ | 105 | 52500000 | 131 | 65500000 | 0 | 15 | 7500000 | 0 |
| 17 | ಕಲಬುರಗಿ | 68 | 34000000 | 63 | 31500000 | 22 | 27 | 13500000 | 0 |
| 18 | ಕೊಡಗು | 5 | 2500000 | 6 | 3000000 | 0 | 1 | 500000 | 0 |
| 19 | ಕೋಲಾರ | 1 | 500000 | 0 | 0 | 2 | 0 | 0 | 0 |
| 20 | ಕೊಪ್ಪಳ | 25 | 12500000 | 18 | 9000000 | 3 | 8 | 4000000 | 1 |
| 21 | ಮಂಡ್ಯ | 45 | 22500000 | 37 | 18500000 | 14 | 4 | 2000000 | 10 |
| 22 | ಮೈಸೂರು | 68 | 34000000 | 66 | 33000000 | 2 | 24 | 12000000 | 0 |
| 23 | ರಾಯಚೂರು | 17 | 8500000 | 17 | 8500000 | 0 | 5 | 2500000 | 0 |
| 24 | ರಾಮನಗರ | 7 | 3500000 | 3 | 1500000 | 0 | 0 | 0 | 0 |
| 25 | ಶಿವಮೊಗ್ಗ | 50 | 25000000 | 51 | 25500000 | 0 | 9 | 4500000 | 1 |
| 26 | ತುಮಕೂರು | 17 | 8500000 | 15 | 7500000 | 1 | 0 | 0 | 0 |
| 27 | ಉಡುಪಿ | 0 | 0 | 0 | 0 | 0 | 0 | 0 | 0 |
| 28 | ಉತ್ತರಕನ್ನಡ | 9 | 4500000 | 10 | 5000000 | 1 | 0 | 0 | 0 |
| 29 | ವಿಜಯಪುರ | 58 | 29000000 | 31 | 15500000 | 18 | 5 | 2500000 | 0 |
| 30 | ವಿಜಯನಗರ | 27 | 13500000 | 21 | 10500000 | 0 | 5 | 2500000 | 0 |
| 31 | ಯಾದಗಿರಿ | 66 | 33000000 | 39 | 19500000 | 3 | 3 | 1500000 | 0 |
| | **ಒಟ್ಟು** | **1081** | **540500000** | **896** | **448000000** | **121** | **183** | **91500000** | **16** |

ಷರಾ

1 ಬಾಕಿ ಉಳಿದಿರುವ ಪ್ರಕರಣಗಳು ಹಿಂದಿನ ಸಾಲಿಗೆ ಸೇರಿರುವುದರಿಂದ ಸರ್ಕಾರದ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 658 ವೆಚ್ಚ-7/2024 ದಿ: 3-7-2024 ಮತ್ತು ಸರ್ಕಾರದ ಪತ್ರ ಸಂಖ್ಯೆ ಆರ್.ಡಿ 100 ಕೆಎಟಿ ಎಸ್.ಎಸ್.ಪಿ.2021 ದಿ: 6-7-2024 ರಂತೆ ಪರಿಹಾರ ವಿತರಿಸಲು ಅವಕಾಶವಿರುವುದಿಲ್ಲ.

2 2025-26ನೇ ಸಾಲಿನ ಬಾಕಿ ಉಳಿದಿರುವ 16 ಪ್ರಕರಣಗಳು ಪರಿಶೀಲನ ಹಂತದಲ್ಲಿದ್ದು, ಪರಿಶೀಲನಾ ಕಾರ್ಯದ ನಂತರ ಪರಿಹಾರ ವಿತರಣೆಗೆ ಕ್ರಮ ವಹಿಸಲಾಗುವುದು.

ಆಯುಕ್ತರು
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು, ಬೆಂಗಳೂರು.

ಅನುಬಂಧ-3

FD/658/EXP7/2024-EXP7-FINANCE DEPT.SEC

ಆಇ 658 ವೆಚ್ಚ-7/2024

RD/100/KAT/SSP/2024

ಆರ್ಥಿಕ ಇಲಾಖೆ (ವೆಚ್ಚ-7)

ದಿನಾಂಕ:03-07-2024

ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಪ್ರಸ್ತಾವನೆ ಸಂಬಂಧಿಸಿದಂತೆ, ಇನ್ನು ಮುಂದೆ ಆಯಾ ಸಾಲಿನಲ್ಲಿ ಸಂಭವಿಸಿದ ರೈತರ ಆತ್ಮಹತ್ಯೆ, ಬಣವೆ ನಷ್ಟ ಮತ್ತು ಆಕಸ್ಮಿಕ ಮರಣ ಪ್ರಕರಣಗಳಿಗೆ ಆಯಾ ಆರ್ಥಿಕ ಸಾಲಿನಲ್ಲಿಯೇ ಪರಿಹಾರ ಪಾವತಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡುವ ಷರತ್ತಿನೊಂದಿಗೆ ಬೆಳಗಾವಿ, ಕಲಬುರ್ಗಿ ಜಿಲ್ಲೆಗೆ ಸಂಬಂಧಿಸಿದ ಕಳೆದ ಮೂರು ವರ್ಷಗಳ ಒಟ್ಟು 41 ರೈತರ ಆತ್ಮಹತ್ಯೆ, ಬಣವೆ ನಷ್ಟ ಮತ್ತು ಆಕಸ್ಮಿಕ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತ ಒಟ್ಟು ರೂ.2.29 ಕೋಟಿ ಪರಿಹಾರವನ್ನು 2024-25 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 2235-60-102-1-08 (Widow Pension for Farmer Suicide Cases) - 100 ( Financial Assistance/Relief ) ರಡಿ ಲಭ್ಯವಿರುವ ಅನುದಾನದಿಂದ ಬಿಡುಗಡೆ ಮಾಡುವಂತೆ ಆಡಳಿತ ಇಲಾಖೆಗೆ ತಿಳಿಸಿದೆ.

(ಸರ್ಕಾರದ ಕಾರ್ಯದರ್ಶಿ (ವೆಚ್ಚ)
ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ)

Signed by Prajith K M Nambiar
Date: 03-07-2024 17:12:56
Reason: Approved

(ಪ್ರಜೀತ್ ಕೆ.ಎಂ. ನಂಬಿಯಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವೆಚ್ಚ-7&8)

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. ... [illegible])

ಅನುಬಂಧ-3

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್ ಡಿ/100/ಕೆಎಟಿ/ಎಸ್.ಎಸ್.ಪಿ/2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:06.07.2024.

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ವಿಪತ್ತು ನಿರ್ವಹಣೆ, ನೋಂದಣಿ & ಮುದ್ರಾಂಕ & ಡಿಎಸ್ಎಸ್‌ಪಿ)
ಕಂದಾಯ ಇಲಾಖೆ,
ಬೆಂಗಳೂರು.

**ಇವರಿಗೆ,**

ನಿರ್ದೇಶಕರು,
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ,
ಕಂದಾಯಭವನ, ಕೆ.ಜಿ.ರಸ್ತೆ,
ಬೆಂಗಳೂರು-560009.

ಮಾನ್ಯರೇ,

ವಿಷಯ:- 2019-20, 2021-22 ಮತ್ತು 2022-23ನೇ ಸಾಲಿನ ರೈತರ ಆತ್ಮಹತ್ಯೆ ಬಣವೆ ನಷ್ಟ ಮತ್ತು ಆಕಸ್ಮಿಕ ಮರಣ ಪ್ರಕಣಗಳಿಗೆ ಪರಿಹಾರ ನೀಡುವ ಕುರಿತು

ಉಲ್ಲೇಖ:- ತಮ್ಮ ಏಕ ಕಡತ ಸಂಖ್ಯೆ:RC-DSSPOFSC/11/2024-1440800

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಏಕ ಕಡತದಲ್ಲಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಪ್ರಸ್ತಾವನೆಗೆ ಸಂಬಂಧಿಸಿದಂತೆ, ಇನ್ನು ಮುಂದೆ ಆಯಾ ಸಾಲಿನಲ್ಲಿ ಸಂಭವಿಸಿದ ರೈತರ ಆತ್ಮಹತ್ಯೆ ಬಣವೆ ನಷ್ಟ ಮತ್ತು ಆಕಸ್ಮಿಕ ಮರಣ ಪ್ರಕಣಗಳಿಗೆ ಆಯಾ ಆರ್ಥಿಕ ಸಾಲಿನಲ್ಲಿಯೇ ಪರಿಹಾರ ಪಾವತಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡುವ ಷರತ್ತಿನೊಂದಿಗೆ, ಬೆಳಗಾವಿ,ಕಲಬುರ್ಗಿ ಜಿಲ್ಲೆಗೆ ಸಂಬಂಧಿಸಿದ 2019-20, 2021-22 ಮತ್ತು 2022-23ನೇ ಸಾಲಿನ ಒಟ್ಟು 41 ರೈತರ ಆತ್ಮಹತ್ಯೆ, ಬಣವೆ ನಷ್ಟ ಮತ್ತು ಆಕಸ್ಮಿಕ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ರೂ. 2.29 ಕೋಟಿ ಪರಿಹಾರವನ್ನು 2024-25ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 2235-60-102-1-08 (Widow Pension foe Farmer Suicide Cases)- 100 ( Financial Assistance / Relief) ರಡಿ ಲಭ್ಯವಿರುವ ಅನುದಾನದಿಂದ ಬಿಡುಗಡೆ ಮಾಡುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

(ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 658 ವೆಚ್ಚ-7/2024, ದಿನಾಂಕ:03.07.2024ರ ಸಹಮತಿಯೊಂದಿಗೆ ಹೊರಡಿಸಿದೆ)

ತಮ್ಮ ನಂಬುಗೆಯ,

**(ಜಿ.ಎನ್.ಸುಶೀಲ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ,
(ಕೆ.ಎ.ಟಿ, ಬಾ.ನಿ.ಮತ್ತು ಡಿ.ಎಸ್.ಎಸ್.ಪಿ)

ಅನುಬಂಧ-7

ಆಇ 956 ವೆಚ್ಚ-7/2025 ಆರ್ಥಿಕ ಇಲಾಖೆ (ವೆಚ್ಚ-7)

CKSDMA-SSPOFSC/39/2025 ದಿನಾಂಕ:06-11-2025

ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಕೆಳಗಿನಂತೆ ಕಾಲಮಿತಿ ನಿರ್ಣಯಿಸಿ ಕ್ರಮವಹಿಸಲು ಆಡಳಿತ ಇಲಾಖೆಯು ಕೋರಿರುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿಸಿದೆ.

- ರೈತರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ನಡೆದ ದಿನಾಂಕದಿಂದ 9 ತಿಂಗಳ ಒಳಗಾಗಿ ಇತ್ಯರ್ಥ ಪಡಿಸಿ ಪಾವತಿಸಲು ಹಾಗೂ
- ಆಕಸ್ಮಿಕ ಮರಣ ಮತ್ತು ಬಣವೆ ನಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಕರಣ ನಡೆದ ದಿನಾಂಕದಿಂದ 6 ತಿಂಗಳ ಒಳಗಾಗಿ ಇತ್ಯರ್ಥ ಪಡಿಸಿ ಪಾವತಿಸಲು.

{ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ}

Digitally signed by
PRAJITH KM NAMBIAR
Date: 06-11-2025
14:56:17
(ಪ್ರಜೀತ್ ಕೆ.ಎಂ. ನಂಬಿಯಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವೆಚ್ಚ-7&8)

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ.

## ಅನುಬಂಧ-5

**ರೈತರ ಅನುಕೂಲಕ್ಕಾಗಿ ಈ ಕೆಳಗಿನ ವಿವಿಧ ಯೋಜನೆ / ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.**

- ಬೀಜಗಳ ಪೂರೈಕೆ: ಬೀಜಗಳ ಪೂರೈಕೆ ಯೋಜನೆಯಡಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ವಿವಿಧ ಕೃಷಿ ಬೆಳೆಗಳ ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ.

- ಕೃಷಿ ಯಾಂತ್ರೀಕರಣ: ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಅನುವು ಮಾಡಿಕೊಡಲು ಹಾಗೂ ಕೂಲಿ ಕಾರ್ಮಿಕರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ಕೃಷಿ ಯಾಂತ್ರೀಕರಣ ಯೋಜನೆಯಡಿ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ ಹಾಗೂ 45 ಪಿ.ಟಿ.ಒ ಹೆಚ್.ಪಿ ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

- ಕೃಷಿ ಸಂಸ್ಕರಣೆ: ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು, ಟಾರ್ಪಾಲಿನ್ ಮತ್ತು ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು ಮತ್ತು ಟಾರ್ಪಾಲಿನ್ ಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನದಡಿ ನೀಡಲಾಗುವುದು. ಸಣ್ಣ · ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.75 ಹಾಗೂ ಪ.ಜಾ./ಪ.ಪಂ., ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.

- 'ಸೂಕ್ಷ್ಮ ನೀರಾವರಿ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಮಾರ್ಗಸೂಚಿ ಅನ್ವಯ ಸಣ್ಣ / ಅತಿ ಸಣ್ಣ ರೈತರಿಗೆ ಶೇ.55 ಮತ್ತು ಇತರೇ ವರ್ಗದ ರೈತರಿಗೆ ಶೇ.45 ರಷ್ಟು ಸಹಾಯಧನವನ್ನು ಪ್ರತಿಯೊಬ್ಬ ರೈತರಿಗೆ ಗರಿಷ್ಠ 5.0 ಹೆಕ್ಟೇರ್ ಪ್ರದೇಶದವರೆಗೆ ನೀಡಲು ಅವಕಾಶವಿರುತ್ತದೆ. ಇದರಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40 ಇದ್ದು, ರಾಜ್ಯದಲ್ಲಿ ರಾಜ್ಯ ಸರ್ಕಾರದ ವತಿಯಿಂದ ರಾಜ್ಯದ ಪಾಲಿನ ಹೆಚ್ಚುವರಿ ಸಹಾಯಧನವನ್ನು ಸೇರಿಸಿ, ಎಲ್ಲಾ ವರ್ಗದ ರೈತರಿಗೆ ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆಗೆ ಶೇ. 90ರ ಸಹಾಯಧನವನ್ನು ನೀಡಲಾಗುತ್ತಿದೆ.

- ಸಸ್ಯ ಸಂರಕ್ಷಣೆ: ಶೇ.50ರ ರಿಯಾಯಿತಿ ದರದಲ್ಲಿ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ ಮಾಡಲಾಗುತ್ತಿದೆ.

- ರೈತ ಸಿರಿ ಕಾರ್ಯಕ್ರಮದಡಿ ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು, ಬರಗು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ದಂತೆ ಗರಿಷ್ಠ ಎರಡು ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆದ ಎಲ್ಲಾ ರೈತರುಗಳಿಗೆ ಬೆಳೆ ಸಮೀಕ್ಷೆ ಆಧಾರದಂತೆ ಪ್ರೋತ್ಸಾಹಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು.

- ಸಾವಯವ ಇಂಗಾಲ ಅಭಿಯಾನ: ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ಶೇ. 75ರ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುವುದು.

- ಬೆಂಬಲ ಬೆಲೆ: ಕೇಂದ್ರ ಸರ್ಕಾರವು ಪ್ರತಿ ವರ್ಷ ಮುಂಗಾರು ಹಾಗು ಹಿಂಗಾರು ಹಂಗಾಮಿಗೆ ಮುಂಚಿತವಾಗಿ ಬೆಂಬಲ ಬೆಲೆ ಘೋಷಣೆ ಮಾಡುತ್ತಿದ್ದು, ಸಗಟು ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಮಾರಾಟವಾಗುವ ಸಂದರ್ಭಗಳಲ್ಲಿ ಬೆಂಬಲ ಬೆಲೆಯಲ್ಲಿ ರೈತರಿಂದ ಉತ್ಪನ್ನಗಳನ್ನು ಖರೀದಿಸಲಾಗುತ್ತಿದೆ. ಅಲ್ಲದೆ, ಅವಶ್ಯಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಘೋಷಿಸಿದ ಬೆಂಬಲ ಬೆಲೆಯ ಜೊತಗೆ ರಾಜ್ಯ ಸರ್ಕಾರದ ಪ್ರೋತ್ಸಾಹಧನವನ್ನೂ ಸಹ ನೀಡಲಾಗುತ್ತಿದೆ.

- ಹೊಸ ಬೆಳೆ ವಿಮಾ ಯೋಜನೆ: ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುತ್ತಿದೆ.

- ಪಿ.ಎಂ.ಕಿಸಾನ್ ಯೋಜನೆ: ಈ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಎಲ್ಲಾ ಅರ್ಹ ರೈತ ಕುಟುಂಬಗಳಿಗೆ ರೂ.6000 ಗಳನ್ನು 3 ಕಂತುಗಳಲ್ಲಿ ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ.

- ಬೆಳೆ ಪರಿಹಾರ: ಪ್ರಾಕೃತಿಕ ವಿಕೋಪಗಳಿಂದ ಬೆಳೆಹಾನಿ ಸಂಭವಿಸಿದಲ್ಲಿ, ರಾಷ್ಟ್ರ ಹಾಗೂ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೈತರಿಗೆ ಪರಿಹಾರ ನೀಡಲಾಗುತ್ತಿದೆ.

- ಕೃಷಿ ಆವರ್ತ ನಿಧಿ: ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಬೆಲೆ ಕುಸಿತವಾದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಆವರ್ತ ನಿಧಿಯನ್ನು ನಿರ್ವಹಿಸಲಾಗುತ್ತಿದೆ.

- ರೈತರಿಗೆ ನೇರವಾಗಿ ಸಹಕಾರ ಸಂಘಗಳಿಂದ ಸಾಲದ ನೆರವು: ಸಹಕಾರ ಸಂಘಗಳ ಮೂಲಕ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಗರಿಷ್ಠ ರೂ. 5.00 ಲಕ್ಷಗಳವರೆಗೆ ಅಲ್ಪಾವಧಿ ಸಾಲ ಮತ್ತು ಶೇ.3ರ ಬಡ್ಡಿಯಲ್ಲಿ ರೂ. 15.00 ಲಕ್ಷಗಳವರೆಗೆ ಮಧ್ಯಮಾವಧಿ ಸಾಲವನ್ನು ನೀಡಲಾಗುತ್ತದೆ.

- ಬೆಳೆ ಸಾಲಕ್ಕೆ ಸಹಾಯಧನ : ಈ ಯೋಜನೆಯಡಿ ವಾಣಿಜ್ಯ ಬ್ಯಾಂಕುಗಳು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ ಅಲ್ಪಾವಧಿ ಸಾಲ ಪಡೆದ ರೈತರಿಗೆ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ (SLBC) ಮೂಲಕ ಸಾಲದ ಮೊತ್ತ ರೂ.1.00,000/- ಮಿತಿಯೊಳಗಿನ ಬೆಳೆ ಸಾಲ/ಅಲ್ಪಾವಧಿ ಕೃಷಿ ಸಾಲವನ್ನು ಬ್ಯಾಂಕ್ ನಿಗದಿಪಡಿಸಿದ ಅವಧಿಯೊಳಗೆ ಪಾವತಿಸಿದ ರೈತರಿಗೆ ಶೇ.1 ರ ಬಡ್ಡಿ ರಿಯಾಯಿತಿ ನೀಡಲಾಗುವುದು.

- ಕೃಷಿ ಭಾಗ್ಯ: ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ), ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ, ಹೊಂಡದಿಂದ ನೀರು ಎತ್ತಲು ಡೀಸಲ್/ಪೆಟ್ರೋಲ್/ಸೋಲಾರ್ ಪಂಪ್ ಸೆಟ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರ ಸಹಾಯಧನವನ್ನು ಒದಗಿಸಲಾಗುತ್ತಿದೆ ಹಾಗೂ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕಗಳ ಅಳವಡಿಕೆಗೆ ಶೇ.90 ರ ಸಹಾಯಧನವನ್ನು ಎಲ್ಲಾ ವರ್ಗದ ರೈತರಿಗೆ ನೀಡಲಾಗುತ್ತದೆ. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಾಣಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.50 ರ ಸಹಾಯಧನವನ್ನು ಒದಗಿಸಲಾಗುತ್ತಿದೆ.

- ಹೈಟೆಕ್ ಹಾರ್ವೆಸ್ಟರ್ ಹಬ್- ಹೈಟೆಕ್ ಹಾರ್ವೆಸ್ಟರ್ ಹಬ್ ಗಳ ಸ್ಥಾಪನೆಗೆ ಶೇ.40 ರಿಂದ ಶೇ.70 ರಷ್ಟು ಸಹಾಯಧನದಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳು, ಇತರ ಸಂಘ-ಸಂಸ್ಥೆಗಳು ಹಾಗೂ ವೈಯಕ್ತಿಕ ಫಲಾನುಭವಿಗಳಿಗೆ ಪ್ರತಿ ಘಟಕಕ್ಕೆ ಗರಿಷ್ಟ ರೂ.100.00 ಲಕ್ಷಗಳಿಗೆ ಮೀರದಂತೆ ಅನುದಾನ ನೀಡಲಾಗುತ್ತದೆ.

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಕಾರ್ಯಕ್ರಮದಡಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ" ಮೂಲಕ ರೈತನ ಆದಾಯ ಹೆಚ್ಚಳ ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ/ಜಮೀನಿನಲ್ಲಿ ಬೆಳೆ ಉತ್ಪಾದಕತೆ, ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗಿದೆ.

- ರಾಷ್ಟ್ರೀಯ ಆಹಾರ ಸುರಕ್ಷತಾ ಅಭಿಯಾನ ಮತ್ತು ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು (NMEO-Oilseeds): ವಿವಿಧ ಆಹಾರ ಬೆಳೆಗಳು, ದ್ವಿದಳ ಧಾನ್ಯಗಳು, ಹತ್ತಿ, ಕಬ್ಬು ಮತ್ತು ಎಣ್ಣೆ ಕಾಳು ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ ಹಾಗೂ ಕೃಷಿ ಉಪಕರಣಗಳನ್ನು ಶೇ.50ರ ಸಹಾಯಧನದಡಿ ನೀಡಲಾಗುತ್ತದೆ.

- ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸಾಂತ್ವನ/ಆತ್ಮಸ್ಥೈರ್ಯ ತುಂಬಲು ಹಿರಿಯ ಅಧಿಕಾರಿಗಳೊಂದಿಗೆ ಇನ್ಸ್‌ಸ್ಪೆಕ್ಟರ್ ಆಫ್ ಪೊಲೀಸ್, ತಹಶೀಲ್ದಾರ್‌ರವರು ಮತ್ತು ಸಹಾಯಕ ಕೃಷಿ ನಿರ್ದೇಶಕರು ಮನೆಗಳಿಗೆ ಭೇಟಿ ನೀಡುತ್ತಾರೆ. ಅಷ್ಟೇ ಅಲ್ಲದೆ ಸರ್ಕಾರದ ವಿವಿಧ ಸವಲತ್ತುಗಳನ್ನು ಅಂತಹ ಕುಟುಂಬಗಳಿಗೆ ತಲುಪಿಸಲು ಜಿಲ್ಲಾ ಮಟ್ಟದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ಅರ್ಹ ರೈತ ಆತ್ಮಹತ್ಯೆ ಪ್ರಕರಣಗಳಿಗೆ ರೂ.5.00 ಲಕ್ಷ ಪರಿಹಾರ ಧನವನ್ನು ಮೃತ ವ್ಯಕ್ತಿಯ ವಾರಸುದಾರರಿಗೆ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆಯಿಂದ ನೀಡಲಾಗುತ್ತಿದೆ. ಇಲಾಖೆಯ ಎಲ್ಲಾ ತರಬೇತಿಗಳಲ್ಲಿ ರೈತರಿಗೆ ಆತ್ಮಸ್ಥೈರ್ಯ ತುಂಬುವ ಕುರಿತು ಅರಿವು ಮೂಡಿಸಲಾಗುತ್ತಿದೆ.

ಅಪರ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ ಮತ್ತು ಯೋಜನೆ)